# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5016/2025 ಪ್ರಾಸಾ-02
ಚಾಸಾ-12

ದಿನಾಂಕಃ 09-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಹೇಮಂತ್ ಎಸ್.ಜೆ. |
| **ತಂದೆಯ / ಗಂಡನ ಹೆಸರು** | ಗರುಡಪ್ಪ |
| **ವಯಸ್ಸು** | 30 |
| **ಉದ್ಯೋಗ** | ಜೂನಿಯರ್ ಇಂಜಿಯರ್ , ಪಿಡಬ್ಲೂಡಿ , ಕೊರಟಗೆರೆ |
| **ವಾಸಸ್ಥಳ** | ಕೊರಟಗೆರೆ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು 2023 ರಿಂದ ಇಲ್ಲಿಯವರೆಗೆ ಜೂನಿಯರ್ ಇಂಜಿಯರ್ ಆಗಿ ಪಿಡಬ್ಲೂಡಿ , ಕೊರಟಗೆರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ದಿ. 10.06.2024 ರಂದು ಕೊರಟಗೆರೆ ಪೊಲೀಸ್ ಠಾಣೆಯಿಂದ ನಮ್ಮ ಕಚೇರಿಗೆ ಕೃತ್ಯ ನಡೆದ ಸ್ದಳದ ನಕಾಶೆ ತಯಾರಿಸಿಕೊಡಲು ಮನವಿ ಬಂದಿದ್ದು ಅದರಂತೆ ಸಹಾಯಕ ಕಾರ್ಯಪಾಲಕ ಇಂಜಿಯರ್ ರವರು ನನ್ನನ್ನು ನೇಮಕ ಮಾಡಿರುತ್ತಾರೆ. ದಿ. 26.06.2024 ರಂದು ನನ್ನನ್ನು ಚಾಸಾ-15 ರವರು ಅವರ ಜೊತೆ ಕೃತ್ಯ ನಡೆದ ಸ್ದಳವಾದ ಸಿ.ಎನ್.ದುರ್ಗ ಹೋಬಳಿ , ಮಲ್ಲೆಕಾವು ಗ್ರಾಮದ ಲಕ್ಷ್ಮೀಕಾಂತ ರವರ ಮನೆಯ ಮುಂಭಾಗಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-15 ರವರು ಕೃತ್ಯ ನಡೆದ ಸ್ದಳ ತೋರಿಸಿದ್ದು ನಾನು ಸ್ದಳ ಪರಿಶೀಲನೆ ಮಾಡಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿಕೊಂಡು ಕಚೇರಿಗೆ ಮರಳಿ ಬಂದು ನಕ್ಷೆಯನ್ನು ತಯಾರು ಮಾಡಿರುತ್ತೆನೆ. ನನ್ನ ಮೊಬೈಲ್ ನಿಂದ ಜಿ.ಪಿ.ಎಸ್. ಪೊಟೋ ತೆಗೆದಿರುತ್ತೇವೆ.

ಪೊಟೋವನ್ನು ಕಂಪ್ಯೂಟರ್ ಗೆ ಹಾಕಿ ಪ್ರಿಂಟ್ ತೆಗೆದು ಮತ್ತು ನಕ್ಷೆ ತಯಾರಿಸಿ ಸಹಾಯಕ ಕಾರ್ಯಪಲಾಕ ಇಂಜಿಯರ್ ರವರಿಗೆ ಸಲ್ಲಿಸಿರುತ್ತೇನೆ. ಸಹಾಯಕ ಕಾರ್ಯಪಲಾಕ ಇಂಜಿಯರ್ ಕೊರಟಗೆರೆ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ನ್ಯಾಯಾಲಯದಲ್ಲಿರುವ ಕವಚ ಪತ್ರ , ನಕ್ಷೆ ಮತ್ತು ಜಿ.ಪಿ.ಎಸ್. ಪೊಟೋ ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ನಮ್ಮ ಸಹಾಯಕ ಕಾರ್ಯಪಲಾಕ ಇಂಜಿಯರ್ ರವರ ಸಹಿ ನೋಡಿ ಗುರುಸಿತಿರುತ್ತಾರೆ. ಸದರಿ ಕವಚ ಪತ್ರವನ್ನು ನಿಪಿ-3 ಎಂದು , ಸಹಾಯಕ ಕಾರ್ಯಪಲಾಕ ಇಂಜಿಯರ್ ಸಹಿ ನಿಪಿ-3(ಎ) ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿಪಿ-4 ಎಂದು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ನಕ್ಷೆಯನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಜಿ.ಪಿ.ಎಸ್. ಪೊಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು,ಶ್ರೀ. ಜಿ.ಬಿ.ಎ. ವಕೀಲರಿಂದ ಆರೋಪಿ ಪರವಾಗಿ:-</u>**

ನಾನು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಕೊಟ್ಟಾಗ ಪಿರ್ಯಾದಿ , ತನಿಖಾಧಿಕಾರಿ ಹಾಜರಿರಲಿಲ್ಲ. ನಾನು ಸ್ಥಳಕ್ಕೆ ಬೇಟಿ ಕೊಟ್ಟಿರುವುದಿಲ್ಲ , ತನಿಖಾಧಿಕಾರಿ ಹೇಳಿದಂತೆ ಕಚೇರಿಯಲ್ಲಿ ಕುಳಿತು ನಕ್ಷೆ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**